H.D. KOTE LIME KANKAR

Sl. No.	QL No.	Mineral	Date Grant & Period	Extent and Location
1 2	3	4	5	6
1. F.Babu	29	L. Kankor	31.01.01 5 yrs	1-00 Hunganalli

K.R. NAGAR LIME KANKAR

1. D.N. Jayaram	24	L. Kankor	27.12.00	1-00 Dodada halli

ಚಾಮರಾಜನಗರ ಜಿಲ್ಲೆ ಮಹದೇಶ್ವರ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರುವ ಅವ್ಯವಹಾರ

595(1093) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ ಮಹದೇಶ್ವರ ಸಕ್ಕರೆ ಕಾರ್ಖಾನೆ ಮಾಲೀಕರು ಯಾರು:

ಆ) ಈ ಕಾರ್ಖಾನೆಯಿಂದ ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾದ ಬಾಕಿ ಹಣ ಎಷ್ಟು? ಈವರೆಗೆ ಪಾವತಿಸಿರುವ ಹಣದ ವಿವರ ನೀಡುವುದು?

ಇ) ಕಾರ್ಖಾನೆಗಳಲ್ಲಿ ಕಬ್ಬು ತೂಕ ಮಾಡುವಾಗ ಮೋಸ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಈ) ಕಾರ್ಖಾನೆಯ ಹೊರಗೆ ತೂಕದ ಯಂತ್ರ ಅಳವಡಿಸಲು ಸರ್ಕಾರಕ್ಕೆ ತೊಂದರೆ ಏನಾದರೂ ಇದೆಯೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಈ ಕಾರ್ಖಾನೆಯು ಖಾಸಗೀ ಒಡೆತನದ್ದಾಗಿದ್ದು ಮಾಲಿಕತ್ವದ ಬದಲಾವಣೆ ಬಗ್ಗೆ ಸರ್ಕಾರಕ್ಕೆ ನಿಖರ ಮಾಹಿತಿ ಇರುವುದಿಲ್ಲ. ಆದರೆ ಇತ್ತೀಚಿನ ಪತ್ರ ವ್ಯವಹಾರಗಳಿಂದ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಚೆನ್ನೈ ಮೂಲಕ ಮೆ. ಅರುಣ ಶುಗರ್ಸ್ ರವರ ಸುಪರ್ದಿಗೆ ಬಂದಿದೆ ಎಂಬುದು ತಿಳಿದು ಬರುತ್ತದೆ.

ಆ) ಕಾರ್ಖಾನೆಯಿಂದ ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾದ ಬಾಕಿ ರೂ. 12.18 ಕೋಟಿಯಾಗಿರುತ್ತದೆ. ಇದರಲ್ಲಿ ಈವರೆಗೆ ರೂ. ರೂ. 6.83 ಕೋಟಿಗಳಷ್ಟು ಬಾಕಿಯನ್ನು ರೈತರಿಗೆ ಪಾವತಿಸಲಾಗಿದ್ದು, ಇನ್ನೂ ರೂ. 5.35 ಕೋಟಿಯಷ್ಟು ಬಾಕಿ ಇರುತ್ತದೆ.

ಇ) ಸರ್ಕಾರ ಗಮನಕ್ಕೆ ಬಂದಿರುವುದಿಲ್ಲ.

ಈ) ಇಂತಹ ಅವಶ್ಯಕತೆ ಕಂಡು ಬರುವುದಿಲ್ಲ ಆಯಾ ಕಾರ್ಖಾನೆಯವರೇ, ತೂಕದ ಯಂತ್ರ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ರೇಷ್ಮೆ ವಿನಿಮಯ ಕೇಂದ್ರ ರದ್ದು

596(1095) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ವಿನಿಮಯ ಕೇಂದ್ರ ಹಾಗೂ ಜಾರಿ ವಿಭಾಗಗಳನ್ನು ರದ್ದುಗೊಳಿಸಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ;

ಆ) ರೇಷ್ಮೆ ಗೂಡಿನ ಬೆಲೆಯನ್ನು ಅರ್ಧದಷ್ಟು ಕಡಿಮೆ ಮಾಡಿರುವುದಕ್ಕೆ ಇದು ಒಂದು ಕಾರಣವೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ರೇಷ್ಮೆ ವಿನಿಮಯ ಕೇಂದ್ರವನ್ನು ರದ್ದುಗೊಳಿಸಿಲ್ಲ. ಆದರೆ ಕಾಯಿದೆ ಜಾರಿ ದಳದಿಂದ ರಾಜ್ಯದ ನೇಕಾರರಿಗೆ ರೀಲರುಗಳಿಗೆ ತೊಂದರೆಯಾಗುತ್ತಿದೆ ಎಂಬ ದೂರುಗಳಿದ್ದು ಪರಿಶೀಲನೆಗಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಈ ದಳದ ಕೆಲಸ ಕಾರ್ಯಗಳನ್ನು 14.06.2002 ರಿಂದ ಪುನಃ ಆರಂಭಿಸಲಾಗಿದೆ.

ಆ) ರೇಷ್ಮೆ ಗೂಡಿನ ದರ ಕಡಿಮೆಯಾಗಲು ಕೆಳಕಂಡ ಅಂಶಗಳು ಕಾರಣವೆಂದು ಅಭಿಪ್ರಾಯ ಪಡಲಾಗಿದೆ.

1. ಚೀನಾ ದೇಶದಿಂದ ಆಮದಾಗುತ್ತಿರುವ ರೇಷ್ಮೆ

2. ಕೇಂದ್ರ ಸರ್ಕಾರವು 2001-02ನೇ ಸಾಲಿನಲ್ಲಿದ್ದ ಆಮದು ರೇಷ್ಮೆ ಮೇಲೆ ಮೂಲ ಸುಂಕ ಶೇಕಡ 35, ವಿಶೇಷ ಸುಂಕ ಶೇಕಡ 3.5 ವಿಶೇಷ ಹೆಚ್ಚುವರಿ ಸುಂಕ ಶೇಕಡ 4 ರಷ್ಟಿದ್ದದ್ದನ್ನು 2002-03ನೇ ಸಾಲಿಗೆ ಮೂಲ ಸುಂಕ ಶೇಕಡ 30 ಹಾಗೂ ವಿಶೇಷ ಹೆಚ್ಚುವರಿ ಸುಂಕ ಶೇಕಡ 5.2 ರಷ್ಟಕ್ಕೆ ಮಾರ್ಪಡಿಸಿದೆ.

3. ಬಾಂಗ್ಲಾ ದೇಶ ಹಾಗೂ ನೇಪಾಳ ದೇಶಗಳ ಮೂಲಕ ಕಳ್ಳ ಸಾಗಾಣಿಕೆಯಿಂದ ಅನಧಿಕೃತವಾಗಿ ಬರುತ್ತಿರುವ ರೇಷ್ಮೆ

ಗಣಿ ಗುತ್ತಿಗೆ ನೀಡುವ ನಿಯಮ

597(1096) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಗುತ್ತಿಗೆ ನೀಡಲು ಈಗಿನ ನಿಯಮವೇನು;

ಆ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗಿದೆ;